ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ 134/2025**

ಪ್ರ.ವ.ಬೋ.ತಾಃ 26-03-2026

ಚಾಸಾಃ 1 ಫ್ರಾಸಾಃ 1

| | |
|---|---|
| ಸಾಕ್ಷಿಯ ಹೆಸರು | ಭಾನುಪ್ರಕಾಶ್ |
| ತಂದೆ/ಗಂಡನ ಹೆಸರು | ನರಸಿಂಹಮೂರ್ತಿ |
| ವಯಸ್ಸು | 28 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಸಂಕಾಪುರ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನನಗೆ ಆರೋಪಿ ಗೊತ್ತು. ಮೃತ ಮಲ್ಲೇಶಗೌಡ ನಮ್ಮ ದೊಡ್ಡಪ್ಪ. ದಿಃ 24.10.2025 ರಂದು ಬೆಳಗ್ಗೆ 5.45 ಗಂಟೆ ಸಮಯದಲ್ಲಿ ನನ್ನ ದೊಡ್ಡಪ್ಪ ಕಸ ಹಾಕಲು ರಸ್ತೆಯ ಬದಿಯಲ್ಲಿ ಹೋಗುತ್ತಿರುವಾಗ ಆರೋಪಿ ಕೊಡಿಗೇನಹಳ್ಳಿ ಕಡೆಯಿಂದ ಮಧುಗಿರಿ ಕಡೆಗೆ ತನ್ನ ಬಾಬ್ತು ಯಮಹ ದ್ವಿಚಕ್ರ ವಾಹನ ಸಂ ಕೆಎ-51-ಜೆಎಫ್-2788 ವಾಹನವನ್ನು ಅತಿ ವೇಗವಾಗಿ ಚಲಾಯಿಸಿಕೊಂಡು ಬಂದು ನನ್ನ ದೊಡ್ಡಪ್ಪನಿಗೆ ಡಿಕ್ಕಿಪಡಿಸಿದರು. ಇದರಿಂದ ನನ್ನ ದೊಡ್ಡಪ್ಪನ ಮೊಣಕಾಲಿಗೆ, ಕೈ ಮತ್ತು ತಲೆಗೆ ಪೆಟ್ಟಾಗಿ ರಸ್ತೆಯ ಮೇಲೆ ಬಿದ್ದರು. ತಕ್ಷಣ ನಾನು ಮತ್ತು ಚಾಸಾ.2 ರವರು ಆಂಬುಲೆನ್ಸ್ ಮೂಲಕ ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆನಂತರ ಹೆಚ್ಚಿನ ಚಿಕಿತ್ಸೆಗಾಗಿ

ತುಮಕೂರಿನ ಜಿಲ್ಲಾ ಆಸ್ಪತ್ರೆಗೆ ಕೆರೆದುಕೊಂಡು ಹೋಗುತ್ತಿರುವಾಗ ಮಾರ್ಗ ಮಧ್ಯದಲ್ಲಿ ನನ್ನ ದೊಡ್ಡಪ್ಪ ಮೃತಪಟ್ಟರು. ಈ ಬಗ್ಗೆ ನಾನು ಅದೇ ದಿನ ಪೊಲೀಸರಿಗೆ ದೂರು ನೀಡಿರುತ್ತೇನೆ. ಆ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಅದೇ ದಿನ ಪೊಲೀಸರು ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿ ಚಾಸಾ.3 ಮತ್ತು 4 ರವರ ಸಮಕ್ಷಮ ನಾನು ಕೃತ್ಯ ಸ್ಥಳ ತೋರಿಸಿದ ಮೇರೆಗೆ ಬೆಳಗ್ಗೆ 10.15 ರಿಂದ 11.15 ಗಂಟೆಯವರೆಗೆ ಸ್ಥಳ ಪಂಚನಾಮೆ ಮಾಡಿದರು. ಆ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಆನಂತರ ಪೊಲೀಸರು ಆ ಸ್ಥಳದ ಫೋಟೋ ತೆಗೆದುಕೊಂಡರು. ಆ ಫೋಟೋವನ್ನು ನಿಪಿ.3 ಎಂದು ಗುರುತಿಸಲಾಯಿತು. ಆ ಸ್ಥಳದಲ್ಲಿ ಆರೋಪಿ ಆ ಯಮಹ ದ್ವಿಚಕ್ರ ವಾಹನವನ್ನು ಬಿಟ್ಟು ಓಡಿ ಹೋಗಿದ್ದು, ಪೊಲೀಸರು ಆ ವಾಹನವನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋದರು. ಅದೇ ದಿನ ಪೊಲೀಸರು ನನ್ನ, ಚಾಸಾ.3 ಮತ್ತು 4 ರವರ ಸಮಕ್ಷಮ ಬೆಳಗ್ಗೆ 11.45 ರಿಂದ 12.30 ಗಂಟೆಯವರೆಗೆ ಅಮಾನತ್ತು ಪಂಚನಾಮೆ ಮಾಡಿ, ಅಪಘಾತಪಡಿಸಿದ ಯಮಹ ದ್ವಿಚಕ್ರ ವಾಹನ ಸಂ.ಕೆಎ–51–ಜೆಎಫ್–2788 ವಾಹನವನ್ನು ಅಮನತ್ತುಪಡಿಸಿಕೊಂಡರು. ಆ ಅಮಾನತ್ತು ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಒಂದು ಫೋಟೋ ತೆಗೆದರು. ಆ ಫೋಟೋವನ್ನು ನಿಪಿ.5 ಎಂದು ಗುರುತಿಸಲಾಯಿತು. ಈ ಬಗ್ಗೆ

C.C.134/2025
P.W.1

ನಾನು ಪೊಲೀಸರ ಮುಂದೆ ದಿಃ 05.11.2025 ರಂದು ಮರು ಹೇಳಿಕೆ ನೀಡಿರುತ್ತೇನೆ. ಆ ದಿನ ಅಪಘಾತಪಡಿಸಿದ ವ್ಯಕ್ತಿ ಈಗ ನ್ಯಾಯಾಲಯದ ಮುಂದಿರುವ ಆರೋಪಿಯಾಗಿರುತ್ತಾನೆ.

**<u>ಪಾಟೀ ಸವಾಲುಃ</u>– ಆರೋಪಿ ಪರ ವಕೀಲರಿಂದಃ–**

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ರೂ.200/–ರ ಖರ್ಚಿನ ಸಹಿತ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ